ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಆದರೆ, ಜಯದೇವ ಅವರ ಈ ಕೃತಿ ತನ್ನ ನಿರೂಪಣೆಯಿಂದಾಗಿ ಕಥನವಾಗಿ ಅವುಗಳಿಗಿಂತ ಭಿನ್ನವಾಗಿದೆ.

ಸೋಲಿಗರಂತಹ ಆದಿವಾಸಿಗಳನ್ನು ಕುರಿತ ಅಧ್ಯಯನ ಜಗತ್ತಿನಲ್ಲಿ ಶುರುವಾದದ್ದು ವಸಾಹತುಶಾಹಿಯ ಆಡಳಿತ ಪ್ರಾರಂಭವಾದಂದಿನಿಂದ. 16ನೇ ಶತಮಾನದಿಂದ 18ನೇ ಶತಮಾನದವರೆಗೂ ಯುರೋಪಿನ ವಸಾಹತು ರಾಷ್ಟ್ರಗಳಲ್ಲಿದ್ದ ಆದಿವಾಸಿಗಳನ್ನು ಕುರಿತು ಅಧ್ಯಯನ ನಡೆಸಿ ಹಲವಾರು ಸಂಶೋಧಕರು ಲೇಖನಗಳನ್ನು ಪ್ರಕಟಿಸಿದರು. ಈ ಬರಹಗಳನ್ನು ಓದಿದ ಇ.ಬಿ. ಟೈಲರ್ 'ಪ್ರಿಮಿಟಿವ್ ಕಲ್ಚರ್' ಎಂಬ ಪುಸ್ತಕವನ್ನು ಪ್ರಕಟಿಸಿದರು. ಅಲ್ಲಿಂದೀಚೆಗೆ ಮಲಿನೋವಸ್ಕಿ, ಏವಾರ್ಡ್ ಪಿಚರ್ಡ್, ರೇಮಾಂಡ್ ಪರ್ತ್ ಮುಂತಾದವರು ಆದಿವಾಸಿಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಆದಿವಾಸಿಗಳ ಅಧ್ಯಯನದ ಎರಡು ಮುಖ್ಯ ಉದ್ದೇಶಗಳೆಂದರೆ ಆದಿವಾಸಿಗಳ ಸಂಸ್ಕೃತಿಯನ್ನು ತಿಳಿದುಕೊಳ್ಳುವ ಬೌದ್ಧಿಕ ಕುತೂಹಲ ಮತ್ತು ಒಟ್ಟು ಮಾನವ ಸಂಸ್ಕೃತಿಯ ಸ್ವರೂಪದ ವಿಕಾಸದ ನೆಲೆಗಳನ್ನು ತಿಳಿದುಕೊಳ್ಳುವುದು. ಇದು ಮಾನವಶಾಸ್ತ್ರ ಅಧ್ಯಯನಕಾರರ ಕ್ರಮ. ಆದರೆ, ನೆಹರೂ, ಲೋಹಿಯಾ, ವೆರಿಯರ್ ಎಲ್ವಿನ್ ಇವರ ಅಧ್ಯಯನ ಕ್ರಮಗಳು ಬೇರೆ. ಇವರು ಆದಿವಾಸಿಗಳ ಬದುಕಿನ ಕ್ರಮವನ್ನು ಅಧ್ಯಯನ ಮಾಡುವುದರೊಂದಿಗೆ ಅವರ ಅಭಿವೃದ್ಧಿಯ ಮಾರ್ಗಗಳನ್ನು ಚಿಂತಿಸಿದವರು. ಗಿರಿಜನರನ್ನು ಸ್ಪೆಸಿಮನ್‌ಗಳ ಹಾಗೆ ಕಾಡಿನಲ್ಲೇ ಇಡುವ ಬದಲು ಅವರನ್ನು ಮುಖ್ಯವಾಹಿನಿ ಸಮಾಜಕ್ಕೆ ಸೆಳೆದು ತರಬೇಕೆಂಬ ರಾಮಮನೋಹರ ಲೋಹಿಯಾ ಅಭಿಪ್ರಾಯ ಒಂದು ಕಡೆಯಾದರೆ, 'ಆದಿವಾಸಿಗಳನ್ನು ಬದಲಿಸಲು ನೀವು ಯಾರು? ಅವರನ್ನು ಅವರ ಪಾಡಿಗೆ ಕಾಡಿನಲ್ಲೇ ಇರಲು ಬಿಡಿ' ಎಂಬ ವೆರಿಯರ್ ಎಲ್ವಿನ್ ಅವರ ಅಭಿಪ್ರಾಯಗಳು ಮತ್ತೊಂದು ಕಡೆ. ಈ ಎರಡು ಚಿಂತನೆಗಳ ನಡುವೆ ನೆಹರೂ ಅವರು 'ಆದಿವಾಸಿ ಪ್ರದೇಶ'ವನ್ನು ಅತಿಯಾದ ಅಭಿವೃದ್ಧಿಗೆ ಒಳಪಡಿಸಬೇಡಿ, ಬಲವಂತದ ಬದಲಾವಣೆ ಬೇಡ, ಆದಿವಾಸಿಗಳನ್ನು ಅತಿಯಾದ ಆಡಳಿತಕ್ಕೆ ಒಳಪಡಿಸಬೇಡಿ. ಆದಿವಾಸಿಗಳನ್ನು ನಮ್ಮ ಎರಡನೇ ದರ್ಜೆಯ ನಕಲಾಗಿ ಮಾಡುವುದು ಬೇಡ,' ಎಂಬ ಅವರ 'ಪಂಚಶೀಲ' ಚಿಂತನೆಗಳು ಮತ್ತೊಂದು ಕಡೆ. ಈ ಮೂವರ ಚಿಂತನೆಗಳಲ್ಲಿ ಜಯದೇವ ಅವರಿಗೆ ನೆಹರೂ ಅವರ ಚಿಂತನೆಗಳು ಇಷ್ಟವಾದವು. ಸುದರ್ಶನ್ ಮತ್ತು ಸೋಮಸುಂದರ್ ಅವರೂ ಇವರ ಈ ಮಾರ್ಗವನ್ನು ಒಪ್ಪುತ್ತಾರೆ. ಜಯದೇವ ಮತ್ತು ಸಂಗಡಿಗರು ಸೋಲಿಗರ ಅಭಿವೃದ್ಧಿಯನ್ನ ಈ ದಿಕ್ಕಿನಲ್ಲಿಯೇ ಯೋಚಿಸುತ್ತಾರೆ. ಇದರ ವಿವರಗಳು ಈ ಕೃತಿಯುದ್ದಕ್ಕೂ ಕಾಣಿಸುತ್ತವೆ.

ಈ ಕೃತಿಯಲ್ಲಿ ಜಯದೇವ ಅವರು ಮಾನವಶಾಸ್ತ್ರಜ್ಞರ ಸಿದ್ಧಾಂತಗಳು, ವಿಜ್ಞಾನಿಗಳ ತಂತ್ರಜ್ಞಾನ, ರಾಜಕೀಯ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ ಇತ್ಯಾದಿ ಭೌತಿಕ ಅಭೌತಿಕ ಸಂಸ್ಕೃತಿಗೆ ಸಂಬಂಧಿಸಿದ ಎಲ್ಲಾ ವಿವರಗಳೊಂದಿಗೆ ಸೋಲಿಗರ ಸಾಂಸ್ಕೃತಿಕ ಮತ್ತು ಅವರ ಬದುಕಿನ ಸ್ವರೂಪಗಳನ್ನು ಓದುಗರಿಗೆ ವಿವರಣಾತ್ಮಕವಾಗಿ ಕಥನದ ಮಾದರಿಯಲ್ಲಿ ಅನಾವರಣಗೊಳಿಸುತ್ತಾ, ಓದುಗನು ಚಿಂತನೆಗೆ ಒಳಗಾಗುವಂತೆ ಮಂಡಿಸುತ್ತಾ ಹೋಗುತ್ತಾರೆ. ಈ ಕ್ರಮದಲ್ಲಿ ನಮಗೆ ಸಿಗುವ ವಿವರಣಾತ್ಮಕ ಮಾಹಿತಿಗಳು ಮಾನವ ವಿಜ್ಞಾನಕ್ಕೆ ಮತ್ತು ಅಭಿವೃದ್ಧಿ ಅಧ್ಯಯನಕ್ಕೆ ಮಹತ್ವದ ಕೊಡುಗೆಗಳಾಗಿವೆ.

ಆದಿವಾಸಿಗಳ ಅಧ್ಯಯನ ಕ್ರಮದಲ್ಲಿ ಬೇರೆಬೇರೆ ಮಾದರಿಗಳಿವೆ. ಈ ಎಲ್ಲ ಮಾದರಿಗಳನ್ನು ಒಳಗೊಳ್ಳುವ ವಿಶಿಷ್ಟವಾದ ಕಥನದ ಮಾದರಿಗಳನ್ನು ರೂಪಿಸಿಕೊಂಡು ಜಯದೇವ ಅವರು ಸೋಲಿಗರ ಬದುಕಿನ ವಿವರಗಳನ್ನು, ಅವರ ಸಾಂಸ್ಕೃತಿಕ ಬದುಕಿನ ವಿನ್ಯಾಸಗಳನ್ನು ಕಟ್ಟಿಕೊಡುತ್ತಾ ಹೋಗುತ್ತಾರೆ. ಸೋಲಿಗರು ಕೇವಲ ಹಿಂದುಳಿದ ನಿರಕ್ಷರಿ, ನಿರುದ್ಯೋಗಿ ಮತ್ತು ನಮ್ಮ ದೇಶಕ್ಕೆ ಹೊರಲಾಗದ ಹೊರೆಯೆಂದು ಭಾವಿಸಬಾರದು. ಅದು ನಾಗರಿಕ ಸಮಾಜದ